**ಓ.ಎಸ್. 24/2023 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 24.06.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನಗೆ ಪ್ರತಿವಾದಿ ಸಂಬಂಧಿಕರು. 2017 ರಲ್ಲಿ ಕ್ರಯದ ಮಾತುಕತೆಯಾಯಿತು. ನಾನು ದಾವಾ ಆಸ್ತಿಯನ್ನು ನೋಡಿ ಪರಿಶೀಲಿಸಿದ್ದೇನೆ, ದಾಖಲೆಗಳನ್ನು ಪರಿಶೀಲಿಸಿಲ್ಲ. ಮಾತುಕತೆಯಾದಾಗ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ಮಾತುಕತೆ ಆದ ಬಗ್ಗೆ ನಿಶಾನೆ ಪಿ 1 ರಲ್ಲಿ ಹೇಳಿರುವುದಿಲ್ಲ. ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ಎಂದೂ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಹಾಗೂ ಪ್ರತಿವಾದಿ ತೀರಾ ಆತ್ಮೀಯರು ಎಂದರೆ ಸರಿ. ನನ್ನ ಹಾಗೂ ಪ್ರತಿವಾದಿ ಸಹೋದರಿಯ ನಡುವೆ ಒಡನಾಟ ಚೆನ್ನಾಗಿದೆ ಎಂದರೆ ಸರಿ. ನಿಶಾನೆ ಪಿ 1 ರಲ್ಲಿ ಹೇಳಿದ ಹಣವನ್ನು ಪ್ರತಿವಾದಿಯ ತಂದೆ ನನ್ನ ಬಳಿ ಸಾಲವಾಗಿ ಪಡೆದಿದ್ದು ಆ ಸಾಲವನ್ನು ನನಗೆ ಈಗಾಗಲೇ ಹಿಂತಿರುಗಿಸಿದ್ದಾರೆ ಎಂದರೆ ಸರಿಯಲ್ಲ. ಸಾಲ ನೀಡುವ ಸಂದರ್ಭದಲ್ಲಿ ನಾನು ಕೆಲವು ಖಾಲಿ ಕಾಗದ ಪತ್ರಗಳಿಗೆ ಸಹಿ ಪಡೆದಿದ್ದೆ ಎಂದರೆ ಸರಿಯಲ್ಲ. ಗೋಪಾಲಸ್ವಾಮಿ ಮೃತಪಟ್ಟ 3 ವರ್ಷಗಳ ನಂತರ ಅವರ ಸಹಿ ಇದ್ದ ಖಾಲಿ ಪತ್ರಗಳಲ್ಲಿ ನಿ ಪಿ 1 ನ್ನು ಸೃಷ್ಟಿಸಿ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಿ ಪಿ 2 ನ್ನು ಸಹ ನಾವು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ ಪಿ 2 ರಲ್ಲಿ ಹೇಳಿರುವ ಯಾವುದೇ ಹಣ ಮೃತ ಗೋಪಾಲಸ್ವಾಮಿಗೆ ಕ್ರಯದ ಸಲುವಾಗಿ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಅಣ್ಣ ತುಳಸಿರಾಮ್ ಹಾಗೂ ಪ್ರತಿವಾದಿ 3, 4 ಸೇರಿ ದಾಖಲೆಗಳನ್ನು ಸೃಷ್ಟಿಸಿ 2ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ 2ನೇ ಪ್ರತಿವಾದಿಯ ವಿರುದ್ಧ ಅವರ ಸಹೋದರಿಯರು ವಿಭಾಗದ ದಾವೆ ಹೂಡಿರಬಹುದು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. 2ನೇ ಪ್ರತಿವಾದಿಯ ವಿರುದ್ದ ಅವರ ಅತ್ತೆಯರು ಸಹ ದಾವಾ ಆಸ್ತಿಯಲ್ಲಿ ಭಾಗ ಬರಬೇಕೆಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2ನೇ ಪ್ರತಿವಾದಿಯ ತಂದೆ ಮೃತ ಗೋಪಾಲಸ್ವಾಮಿ ತನ್ನ ಜೀವಿತ ಅವಧಿಯಲ್ಲಿ

ಸಾಕಷ್ಟು ಸಾಲ ಮಾಡಿದ್ದು ಆ ಸಾಲ ವಸೂಲಾತಿಗೆ 2ನೇ ಪ್ರತಿವಾದಿಯ ವಿರುದ್ಧ ಸಾಕಷ್ಟು ದಾವೆಗಳು ಹೂಡಿದ್ದಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನ ಹಾಗೂ ಗೋಪಾಲಸ್ವಾಮಿಯ ನಡುವೆ ಯಾವುದೇ ಕ್ರಯದ ಮಾತುಕತೆ ಆಗಿರುವುದಿಲ್ಲ, ಯಾವುದೇ ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ, ಆದ್ದರಿಂದ ನಾನು ದಾವೆಯಲ್ಲಿ ಕೇಳಿದ ಯಾವುದೇ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ನಾನು ಬೆಂಗಳೂರಿನ ನ್ಯಾಯಾಲಯದಲ್ಲಿ ಶೀಘ್ರಲಿಪಿಗಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ನಮ್ಮ ಮೇಲಾಧಿಕಾರಿಗಳಿಂದ ಪೂರ್ವಾನುಮತಿಗೆ ಕೋರಿಕೆ ಸಲ್ಲಿಸಿದ್ದೇನೆ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಎಂ.ಮಂಜುನಾಥ)**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**

**ಪಾಂಡವಪುರ**